# ಸಿವಿಲ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಧೀಶರ ನ್ಯಾಯಾಲಯ, ಮುಂಡರಗಿ.

## ಸಿ.ಸಿ ನಂಃ 168/2020

| | | |
|---|---|---|
| ಸಾಕ್ಷಿಯ ಹೆಸರಃ | ವಿಠ್ಠಲ | ಫ್ರಾಸಾಃ **10** |
| ತಂದೆ/ಗಂಡನ ಹೆಸರುಃ | ವಿರುಪಾಕ್ಷಪ್ಪ | ಚಾಸಾಃ **8** |
| ವಯಸ್ಸುಃ | 51 ವರ್ಷ | ದಿಃ **03.06.2026.** |
| ಉದ್ಯೋಗಃ | ಎ.ಎಸ್.ಐ. ಗ್ರಾಮೀಣ ಪೋಲಿಸ್ ಠಾಣೆ, ಗದಗ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಗದಗ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ನಾನು 2016 ರಿಂದ 2022 ರವರೆಗೆ ಮುಂಡರಗಿ ಪೋಲಿಸ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 17.03.2020 ರಂದು ಸಾಃ 4.00 ಗಂಟೆ ಸುಮಾರಿಗೆ ನಾನು ಠಾಣಾ ಕರ್ತವ್ಯದಲ್ಲಿ ಇದ್ದಾಗ ಚಾಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ್ದ ದೂರಿನ ಆಧಾರದ ಮೇಲೆ ಆರೋಪಿತನ ವಿರುದ್ಧ ಗುನ್ನೆ ನಂ.51/2020 ರಂತೆ ಪ್ರಕರಣ ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಪ್ರ.ವ.ವರದಿಯನ್ನು ಸಲ್ಲಿಸಿರುತ್ತೇನೆ. ದಿಃ 18.03.2020 ರಂದು ಚಾಸಾ.2 ಮತ್ತು 3 ರವರ ಸಮಕ್ಷಮ ಬೆಳಗ್ಗೆ 10.00 ರಿಂದ 11.00 ಗಂಟೆಯವರೆಗೆ ಗುನ್ಹಾ ಸ್ಥಳದ ಪಂಚನಾಮೆಯನ್ನು ಮಾಡಿರುತ್ತೇನೆ. ಅದೇ ದಿವಸ, ಚಾಸಾ 1 ರವರು ತೋರಿಸಿದ 3 ಅಡಿ ಕಟ್ಟಿಗೆ, 6 ಅಡಿ ಕೊಡಲಿ ಕಾವನ್ನು ಪಂಚರ ಸಮಕ್ಷಮ ಜಪ್ತ ಪಡಿಸಿಕೊಂಡಿರುತ್ತೇನೆ. ಅದೇ ದಿವಸ ಚಾಸಾ 1 ರವರ ಪುರವಣಿ ಹೇಳಿಕೆಯನ್ನು ಪಡೆದುಕೊಂಡಿರುತ್ತೆನೆ. ದಿನಾಂಕ 20.03.2020 ರಂದು ಚಾಸಾ.4 ರಿಂದ 7 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 29.05.2020 ರಂದು ಚಾಸಾ 8 ರವರಿಂದ ವೈದ್ಯಕೀಯ ವರದಿ ಮತ್ತು ದಿಃ 15.07.2020 ರಂದು ಚಾಸಾ 9 ರವರಿಂದ ಗಾಯದ ಪ್ರಮಾಣ ಪತ್ರ ಪಡೆದಿರುತ್ತೇನೆ.

ದಿಃ 22.07.2020 ರಂದು ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಗೆ ಈಗಾಗಲೇ ಗುರುತಿಸಲಾಗಿರುವ ನಿಪಿ 1 ನ್ನು ತೋರಿಸಿ, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಎಂದು, ನಿಪಿ 2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 2(ಬಿ) ಎಂದು, ನಿಪಿ 3 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 3(ಬಿ) ಎಂದು, ನಿಪಿ 4 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 4 (ಸಿ) ಎಂದು, ಪ್ರ.ವ.ವ., ಯನ್ನು ನಿಪಿ 5 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 5(ಎ) ಎಂದು, ಪಹಣಿ ಪತ್ರಿಕೆಯನ್ನು ನಿಪಿ 6 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 6 (ಎ) ಎಂದು ಗುರುತಿಸಲಾಯಿತು.

ಈಗಾಗಲೇ ಗುರುತಿಸಲಾಗಿರುವ ಮು.ಮಾ.1 ಮತ್ತು 2 ನ್ನು ಸಾಕ್ಷಿಗೆ ತೋರಿಸಲಾಯಿತು.

ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿದ್ದೇನೆ.

ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಜಿ.ಜಿ.ಐ. ವಕೀಲರಿಂದಃ

ನಾನು ಠಾಣೆಯಲ್ಲಿದ್ದಾಗ ಚಾಸಾ 1 ಮತ್ತು 7 ರವರು ಹಾಜರಾಗಿದ್ದರು. ಚಾಸಾ 1 ರವರು ನನಗೆ ಲಿಖಿತ ದೂರನ್ನು ನೀಡಿದ್ದರು. ನಿಪಿ 5 ರ ಕಲಂ ನಂ.12 ರಲ್ಲಿ ಚಾಸಾ 1 ರವರ ಸಹಿ ಪಡೆದಿರುವುದಿಲ್ಲ. ಚಾಸಾ 1 ರವರು ಠಾಣೆಗೆ ಹಾಜರಾಗಿರುವುದಿಲ್ಲ. ಆದ್ದರಿಂದ, ನಾನು ಸಹಿ ಪಡೆದಿರುವುದಿಲ್ಲ ಎಂದರೆ ಸರಿ ಅಲ್ಲ. ನಾನು ಚಾಸಾ 1 ರವರು ನಿಪಿ 1 ರಲ್ಲಿ ತಿಳಿಸಿದಂತೆ ನ್ಯಾಯಾಲಯದ ಆದೇಶವನ್ನು ಪರಿಶೀಲಿಸಿರುವುದಿಲ್ಲ. ಚಾಸಾ 1 ರವರು ದೂರನ್ನು ನೀಡಲು ವಿಳಂಬವಾದ ಬಗ್ಗೆ ಮಾಹಿತಿ ಪಡೆದುಕೊಂಡಿರುವುದಿಲ್ಲ. ನಾನು ಚಾಸಾ 1 ರವರಿಗೆ ಪುನಃ ಹೇಳಿಕೆ ಪಡೆಯುವ ಸಂದರ್ಭದಲ್ಲಿ ನೋಟಿಸ್ ನೀಡಿರಲಿಲ್ಲ. ನಾನು ಘಟನಾ ಸ್ಥಳಕ್ಕೆ ನಮ್ಮ ಸರ್ಕಾರಿ ವಾಹನದಲ್ಲಿ ನಮ್ಮ ಚಾಲಕನೊಂದಿಗೆ ಹೋಗಿರುತ್ತೇನೆ. ಮುಂಡವಾಡದ ಬಸ್ ನಿಲ್ದಾಣದ ಹತ್ತಿರ ನಿಂತಿದ್ದ ಪಂಚರನ್ನು ನಾನೇ ಕರೆಸಿಕೊಂಡಿರುತ್ತೇನೆ. ಘಟನಾ ಸ್ಥಳಕ್ಕೆ ಮತ್ತು ಮುಂಡವಾಡದ ಬಸ್ ನಿಲ್ದಾಣಕ್ಕೆ ಅಂದಾಜು 80 ಮೀ ಅಂತರವಿದೆ.

ಪಂಚನಾಮೆಯನ್ನು ನಮ್ಮ ಸಿಬ್ಬಂದಿ ಬರೆದಿರುತ್ತಾರೆ. ನಾನು ಪಂಚನಾಮೆಯ ದಸ್ತುರುಗಾರನ ಪ್ರತ್ಯೇಕ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಮು.ಮಾ.1 ಆರು ಅಡಿ ಮತ್ತು ಮು.ಮಾ.2 ಮೂರು ಅಡಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ 8 ರವರಿಂದ ನಿಪಿ 2 ನ್ನು ಮಾತ್ರ ಪಡೆದುಕೊಂಡಿರುತ್ತೇನೆ . ಚಾಸಾ 9 ರವರಿಂದ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ನಾನು ಚಾಸಾ 1 ರವರಿಂದ ರಕ್ತದ ಕಲೆಯ ಬಟ್ಟೆಯನ್ನು ವಶಪಡಿಸಿಕೊಂಡಿರುವುದಿಲ್ಲ. ನಾನು ಚಾಸಾ 1 ರವರಿಂದ ಫಿರ್ಯಾದಿಯನ್ನು ಪಡೆದುಕೊಂಡಿಲ್ಲ ಎಂದರೆ ಸರಿ ಅಲ್ಲ. ಯಾವುದೇ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ತನಿಖೆ ಕೈಗೊಳ್ಳದೇ ಆರೋಪಿತರಿಗೆ ತೊಂದರೆ ಕೊಡವುದಕ್ಕಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಜೆಎಂಎಫ್‌ಸಿ ನ್ಯಾಯಾಧೀಶರು
ಮುಂಡರಗಿ.